2. ಈಗ ರಜಾವೇಲೆ ಇರುವ ಮಿ|| ಸಿ. ವೆಂಕಟರಾಯರನ್ನು ಕೆಲಸಕ್ಕೆ ವಾಪಸು ಕರಸಿ, ಅವರನ್ನ ಕೊಂಚ ಕಾಲದ ವುಟ್ಟಿಗೆ, ಮಿ|| ಸಿ. ರಾಮರಾಯರು ರಜಾವೇಲೆ ಇರುವ ತನಕ ಅತ್ತವಾ ಇನ್ನೊಂದು ಹುಕುಂ ಕೊಡುವ ತನಕ, ಬೆಂಗಳೂರು ಸಬ್ ಡಿವಿಜನಿನ ಚಾರ್ಜಿಗೆ ನೇಮಿಸಿದೆ.

ತಾರೀಖು 12ನೆ ಜೂರ್ 1907.

ನಂ. ರೆ. 10622—ಲ್ಯಾ. ರೆ. 318-06—7, ರಿಕಾರ್ಡ್ಸ್ ಸರ್ಟಿಫಿಂಗ್ ಇನ್‌ಸ್ಪೆಕ್ಟರಾಗಿ ಮೊಕರರ್ರಾಡಲ್ಪಟ್ಟ ಮಿ|| ಆನಂದರಾವ್ ಸರ್ಸಿಯವರಿಗೆ ಬದಲಾಗಿ ಅಸಿಸ್ಟೆಂಟ್ ಕಮಿಷನರ್ ಮಿ|| ಸಿ. ವೆಂಕಟರಾಯರನ್ನು ಮದ್ದಗಿರಿಸಬ್ ಡಿವಿಜನಿಗೆ ನೇಮಿಸಿದೆ.

(1907ನೆ ಇಸವಿಯ ಜೂರ್ 12ನೆ ತಾರೀಖಿನ ರೆ. 10169—ಲ್ಯಾ. ರೆ. 580-06—2 ನಂಬರಿನ ಇಸ್ತಿಹಾರ್ನಾಮೆಯ ವೇರೆ ಇವರಿಗೆ ನೇಮಕವಾಗಿರುವ ಬೆಂಗಳೂರು ಸಬ್ ಡಿವಿಜನಿನ ಚಾರ್ಜ್ ಮತ್ತೊಬ್ಬರಿಂದ ವಹಿಸಲ್ಪಟ್ಟ ತರುವಾಯ ಹೊಸ ಕೆಲಸಕ್ಕೆ ಹೋಗಿ ಸೇರತಕ್ಕದ್ದು.)

ತಾರೀಖು 19ನೆ ಜೂರ್ 1907.

ನಂ. ರೆ. 10737—ಲ್ಯಾ. ರೆ. 525-06—12, ಅಮಲ್ದಾರ್ ಮಿ|| ಸಿ. ಸುಬ್ಬರಾಯಲು ನಾಯಡು ಯವರಿಗೆ, ಮೈಸೂರು ಸರ್ವಿಸ್ ರೆಗ್ಯುಲೇಷ್ಯನ್‌ಗಳ 155ನೆ ನಿಬಂಧನೆಯ ವೇರೆಗೆ, 1907ನೆ ಇಸವಿಯ ಮೇ 5ನೆ ತಾರೀಖಿನಿಂದ ಆರು ತಿಂಗಳ ಕಾಲ ರಜಾ ಕೊಟ್ಟಿದೆ. ಈ ಪೈಕಿ ಮೊದಲ 2 ತಿಂಗಳೂ 17 ದಿವಸಗಳು ಪ್ರಿವಿಲೇಜ್ ರಜಾವಾಗಿಯೂ ಉಳಿದುದು ಸ್ವಂತ ಕೆಲಸದ ವೇಲಿನ ರಜಾವಾಗಿಯೂ ಎಣಿಸಲ್ಪಡತಕ್ಕದ್ದು.

ತಾರೀಖು 20ನೆ ಜೂರ್ 1907.

ನಂ. ರೆ. 10808—ಲ್ಯಾ. ರೆ. 83-06—15, ಕಡೂರು ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್ ಮಿ|| ವಳವಾಯಿ ದೇವರಾಜ ಅರಸಿನವರನ್ನು ಬೆಂಗಳೂರು ಡಿಸ್ಟ್ರಿಕ್ಟಿಗೆ ವರ್ಗಮಾಡಿದೆ.

1907ನೆ ಇಸವಿಯ ಜುಲೈ ಮೊದಲನೆ ತಾರೀಖಿನ ದಿವಸ ಕೆಲಸಕ್ಕೆ ಬಂದು ಸೇರತಕ್ಕದ್ದು.

ಹುಕುಂ ಬವೋಜೇಬ್,
ಸಿ. ಎಸ್. ಬಾಲಸುಂದರಂ ಐಯ್ಯರ್,
ಸರ್ಕಾರದ ಜನರಲ್ ಮತ್ತು ರೆವಿನ್ಯೂ ಇಲಾಖೆಗಳ ಅಫಿಷಿಯೇಟಿಂಗ್ ಸೆಕ್ರಿಟರಿ.

ಪಬ್ಲಿಕ್ ವರ್ಕ್ಸ್.

ಇಸ್ತಿಹಾರ್ನಾಮೆ.

ತಾರೀಖು 27—28ನೆ ಜೂರ್ 1907.

ನಂ. 589—4654, ಶಿವಮೊಗ್ಗ ಡಿವೀರ್ಜ್ ಎಗ್ಜಿಕ್ಯೂಟಿವ್ ಇಂಜನಿಯರ್ (ಹಂಗಾಮಿ) ಮೆ|| ಆರ್. ವಿ. ಸುಂದರಮ್ ಐಯ್ಯರ್, ಬಿ. ಎ., ಬಿ. ಸಿ. ಇ., ಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ 177ನೆ ಆರ್ಟಿಕಲ್ ಅನುಸರಿಸಿ ಸ್ರ್ 1907ನೆ ಜುಲೈ 3ನೆ ತಾರೀಖು ಲಾಗಾಯಿತು ಅಥವಾ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು 15 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿದೆ.

ತಾರೀಖು 2ನೆ ಜುಲೈ 1907.

ನಂ. 596—4762, ವಾಟರ್ ಸಪ್ಲೈ ಮತ್ತು ಸ್ಕೌರ್ಸ್ ಡಿವೀರ್ಜ ಎಗ್ಜಿಕ್ಯೂಟಿವ್ ಇಂಜಿನಿಯರ್ ಮಿ|| ವಿ. ರಂಗಸ್ವಾಮಿ ಐಯ್ಯಂಗಾರ್, ಬಿ. ಸಿ. ಇ., ಯವರಿಗೆ ಮೈಸೂರು ಸರ್ವಿಸ್ ರೆಗ್ಯುಲೇಷ್ 177ನೆ ಆರ್ಟಿಕಲ್ ಅನುಸರಿಸಿ ಸ್ರ 1907ನೆ ಜೂರ್ 24ನೆ ತಾರೀಖಿನಿಂದ 12 ದಿನಗಳ ಪ್ರಿವಿಲೇಜ್ ರಜಾ ಕೊಡಲ್ಪಟ್ಟಿರುತ್ತದೆ.

ಹುಕುಂ ಬವೋಜೇಬ್,
ಬರ್ನಾರ್ಡ್ ಥಾಸ್, ಕ್ಯಾಪ್ಟನ್, ಆರ್. ಇ.,
ಪಬ್ಲಿಕ್ ವರ್ಕ್ಸ್ ಇಲಾಖಾ ಮೈಸೂರು ಗವರ್ನಮೆಂಟ್ ಅಂಡರ್ ಸೆಕ್ರಿಟರಿ.